ಶ್ರೀ ಬಿ. ರಾಮಯ್ಯ.—ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ತಿಳಿಸಿದಂತೆ ಮೂರು ತಾಲ್ಲೂಕುಗಳಲ್ಲಿಯೂ ಮಳೆಯಿಂದ ಹಾನಿಯಾಗಿರತಕ್ಕವರಿಗೆ ಪರಿಹಾರದ ವ್ಯವಸ್ಥೆ ಮಾಡಿರುವುದರಿಂದ ನಾನು ಅವರಿಗೆ ಅಭಾರಿಯಾಗಿದ್ದೇನೆ. ಆದರೆ, ೨ ೪೦೦ ರೂಪಾಯಿ ಮೇಲ್ಪಟ್ಟು ಆದಾಯ ಇರತಕ್ಕ ಪರು ೫–೬ ಎಕರೆ ಜಮೀನು ಇರುವಂತೆ ರೈತರು ನಮ್ಮ ಭಾಗದಲ್ಲಿ ಬಡವರ ಗುಂಪಿಗೆ ಬರುತ್ತಾರೆ. ಕಳೆದ ವಾರ ನಾನೇ ಸ್ವತಃ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದೇನೆ. ಮಾನ್ಯ ಕಂದಾಯ ಸಚಿವರು ಈ ಒಂದು ವರ್ಗಕ್ಕೂ ಬಡ್ಡಿರಹಿತವಾದ ಸಾಲವನ್ನು ೧೦ ವರ್ಷಗಳ ಸಮಕಂತಿನಲ್ಲಿ ಒದಗಿಸುವ ವ್ಯವಸ್ಥೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ,—ತಮ್ಮ ಸಲಹೆ ವಿಚಾರಮಾಡತಕ್ಕದ್ದು. ಪ್ರಶ್ನೆ ಕೇಳುವುದಕ್ಕೆ ಮುಂಚಿತವಾಗಿಯೇ ನಾನು ರಾಮಯ್ಯನವರಿಗೆ ಎಷ್ಟು ಹಣ ಬೇಕಾದರೂ ಕೇಳಿ ಕೊಡುವುದಕ್ಕೆ ತಯಾರಿದ್ದೇವೆಂದು ಹೇಳಿದ್ದೇನೆ. ಆದಕ್ಕೆ ಅವರೂ ಕೂಡ ಒಪ್ಪಿದ್ದಾರೆ. ಇನ್ನು ಹೆಚ್ಚು ಬೇಕೆಂದರೆ ಕೊಡಲಿಕ್ಕೆ ತಯಾರಿದ್ದೇನೆ

Matters under rule 312:

(i) *re: loss to Govt. on account of Tender cum auction of former produce (hala-maddi) by Kundapur by rejecting highest bid·*

†ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).– ಸನ್ಮಾನ್ಯ ಅಧ್ಯಕ್ಷರೇ, ಅರಣ್ಯಗಳಲ್ಲಿ ಕಳೆದ ಮೂರು ವರ್ಷಗಳಿಂದ ಹಾಲುಮಡ್ಡಿ ಉತ್ಪತ್ತಿಗೆ ಸಂಬಂಧಪಟ್ಟಂತೆ ಹಿಂದೆ ನಡೆದಂತೆಯೇ ಹರಾಜು ನಡಯುತ್ತದೆ. ಈ ಸಲವೂ ಹರಾಜು ನಡೆದು ಪೈಪೋಟಿ ಇದ್ದ ಕಾರಣ ಹೆಚ್ಚು ಆದಾಯ ಬಂದಿದೆ ಶಿವಮೊಗ್ಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದೆ ಬಂದಿದ್ದಕ್ಕಿಂತ ೫ ಪಟ್ಟು ಆದಾಯ ಜಾಸ್ತಿ ಬಂದಿದೆ. ಈ ತಿಂಗಳು ೧೭ರಂದು ಕುಂದಾಪುರ, ಶಂಕರನಾರಾಯಣ, ಬೈಂದೂರ ರೇಂಜುಗಳ ಹರಾಜಿನಲ್ಲಿ ಕಂಟ್ರಾಕ್ಟರುಗಳಿಗೆ ಟೆಂಡರ್ ಕೊಟ್ಟು ಟೆಂಡರ್ ಪ್ರಕಟಿಸುವ ಸಂದರ್ಭದಲ್ಲಿ ಏಕಾ ಏಕಿ ಹರಾಜನ್ನು ನಿಲ್ಲಿಸಿ ೪ ಲಕ್ಷ ರೂಪಾಯಿ ಬರತಕ್ಕ ಹರಾಜನ್ನು ಕೇವಲ ೭೦ ಸಾವಿರ ರೂಪಾಯಿಗಳಿಗೆ ಒಂದು ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಗಿರಿಜನ ಸಹಕಾರ ಸಂಸ್ಥೆಗೆ ಕೊಡುವುದಕ್ಕೆ ಆದೇಶ ಹೋಗಿದೆ ಎಂದು ಸುದ್ದಿ ಬಂದಿದೆ ಇದರಿಂದ ೪ ಲಕ್ಷ ರೂಪಾಯಿ ಬರತಕ್ಕ ಹರಾಜನ್ನು ೭೦ ಸಾವಿರ ರೂಪಾಯಿಗೆ ಅಂದರೆ ಕಡಿಮೆ ಹಣಕ್ಕೆ ಈ ಸೊಸೈಟಿಗೆ ಕೊಡುವುದರಿಂದ ಇದರಲ್ಲಿ ಸರ್ಕಾರಕ್ಕೆ ಬರತಕ್ಕ ಆದಾಯ ಕಡಿಮೆಯಾಗುತ್ತದೆ. ಮತ್ತೊಂದು ವಿಷಯ ಪೈಪೋಟಿ ಇದ್ದರೂ ಕೂಡ ಬಹಳ ಕಡಿಮೆ ಹಣಕ್ಕೆ ಪಟ್ಟಭದ್ರಹಿತಗಳಿಗೆ, ಆಸಕ್ತಹಿತಗಳಿಗೆ ಒಬ್ಬಿಬ್ಬರು ಕಂಟ್ರಾಕ್ಟರುಗಳಿಗೆ ಅನುಕೂಲವಾಗುವಂತೆ ಮಾಡುವುದಕ್ಕೆ ಹೊರಟಿರುವುದರಿಂದ ಸಾಕಷ್ಟು ನಷ್ಟವಾಗುತ್ತದೆ. ದುರ್ಬಲ ವರ್ಗದ ಸಹಕಾರ ಸಂಸ್ಥೆಗೆ ಪ್ರೋತ್ಸಾಹ ಕೊಡತಕ್ಕದ್ದು, ಆದರೆ ಅದೇ ವೇಳೆಯಲ್ಲಿ ೧೦–೧೫ ಪರ್ಸೆಂಟ್ ಮಾತ್ರ ಕಡಿಮೆ ಕೊಟ್ಟಿದ್ದರೆ ಈ ಒಂದು ಅನುಮಾನ ಸಂಶಯಕ್ಕೆ ಆಸ್ಪದ ಇರುತ್ತಿರಲಿಲ್ಲ. ಇಷ್ಟಲ್ಲ ಅಲ್ಲಿರತಕ್ಕ ಆಸಕ್ತಹಿತಗಳು ೧೦ ಸಾವಿರ ರೂಪಾಯಿ ಲಾಭ ತೋರಿಸಿ ಹಣ ಗಳಿಸುವುದಕ್ಕೆ ಸಾಧ್ಯತೆ ಇದೆ. ದುರ್ಬಲ ವರ್ಗದವರ ಹೆಸರಿನಲ್ಲಿ ಮಧ್ಯವರ್ತಿಗಳು ದುರುಪಯೋಗ ಮಾಡುವುದಕ್ಕೆ ಅವಕಾಶ ಇದೆ. ಈ ರೀತಿ ತೀರ್ಮಾನ ತೆಗೆದುಕೊಳ್ಳುವ ಮುನ್ನ ಅರಣ್ಯ ಮಂತ್ರಿಗಳು ಆ ಸಹಕಾರ ಸಂಸ್ಥೆಯ ಸ್ಥಿತಿಗತಿಗಳು ಏನು? ಆ ಸಂಸ್ಥೆ ಯಾಮಾಗ ರಿಜಿಸ್ಟರ್ ಆಯಿತು? ಎಷ್ಟು ಜನ ಸದಸ್ಯರಿದ್ದಾರೆ? ಆ ಸೊಸೈಟಿಯಲ್ಲಿ ಹರಿಜನ ಗಿರಿಜನ ಸದಸ್ಯರು ಇದ್ದಾರೆಯೆ? ಈ ಒಂದು ಕಂಟ್ರಾಕ್ಟನ್ನು ನಿರ್ವಹಿಸತಕ್ಕ ಶಕ್ತಿ ಮತ್ತು ಇತರ ಸಲಕರಣೆಗಳು ಆ ಸಂಸ್ಥೆಗೆ ಇದೆಯೇ ಎಂಬ ಬಗ್ಗೆ ಸಂಬಂಧಪಟ್ಟವರಿಂದ ಸಮಜಾಯಿಷಿ ಪಡೆದುಕೊಂಡಿದ್ದಾರೆಯೇ? ಯಾವುದನ್ನೂ ಕೂಡ ಪರಿಶೀಲನೆ ಮಾಡದಿರುವುದರಿಂದ ಸರ್ಕಾರಕ್ಕೆ ಒಂದು ಕಡೆ ಅಪವಾದ ಬರುವುದಲ್ಲದೆ ಬರತಕ್ಕ ಆದಾಯವೂ ತಪ್ಪಿಹೋಗುತ್ತದೆ. ಮಾನ್ಯ ಅರಣ್ಯ ಸಚಿವರು ಕಡಿಮೆ ಬೆಲೆಗೆ ಕೊಡುವುದನ್ನು ನಿಲ್ಲಿಸಿ, ಸಂಬಂಧಪಟ್ಟ ಸೊಸೈಟಿಯ ಬಗ್ಗೆ ವಿವರ ಗಳನ್ನು ತರಿಸಿ ಪರಿಶೀಲನೆ ಮಾಡಬೇಕು. ದುರ್ಬಲ ವರ್ಗದ ಹೆಸರಿನಲ್ಲಿ ಕೆಲವು ಆಸಕ್ತ ಹಿತಗಳು ಹಣ ಸಂಪಾದನೆ ಮಾಡಲಿಕ್ಕೆ ಹೊರಟಿವೆ. ಇದಕ್ಕೆ ತಾವು ಅವಕಾಶ ಕೊಡಬಾರದೆಂದು ಹಾಲುಮಡ್ಡಿ ಕಂಟ್ರಾಕ್ಟ್‌ನಿಂದ ಸರ್ಕಾರಕ್ಕೆ ಸಾಕಷ್ಟು ಆದಾಯ ಬರುತ್ತದೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ರಾಮು ಭಟ್ (ಪುತ್ತೂರು). —ಮಾನ್ಯ ಅಧ್ಯಕ್ಷರೇ, ಮೊದಲು ಇದನ್ನು ಇಲಾಖೆಯವರೇ ಹರಾಜು ಮಾಡಬೇಕೆಂದು ನಿರ್ಣಯ ಮಾಡಿದ್ದರು. ಹಾಲುಮಡ್ಡಿಗೆ ಸಂಬಂಧಪಟ್ಟಂತೆ ಟೆಂಡರ್ ಬಂದು ಕವರುಗಳನ್ನು ಹೊಡೆಯುವ ಕೊನೇ ಗಳಿಗೆಯಲ್ಲಿ ಒಂದು ಸಹಕಾರ ಸಂಸ್ಥೆಗೆ ಈ ಹರಾಜನ್ನು ಕೊಡುವಂತ ಕಾರಣ ಏನು? ಯಾರ ಪ್ರಭಾವದಿಂದ ಇದು ಆಯಿತು? ಸಹಕಾರ ಸಂಘಕ್ಕೆ ಕೊಡಬೇಕೆನ್ನುವ ಉದ್ದೇಶ ಮೊದಲೇ ಇಲಾಖೆಗೆ ಇದ್ದಿದ್ದರೆ, ಇಲಾಖೆಯವರು ಟೆಂಡರ್ ಏತಕ್ಕೆ ಕರೆದರು? ಸಹಕಾರ ಸಂಸ್ಥೆಗೆ ಕೊಡುವ ಬಗ್ಗೆ ಪಣಕಾಸಿನ ಇಲಾಖೆಯ ಒಪ್ಪಿಗೆ ಇತ್ತೆ? ಈಗಾಗಲೇ ಹರಿಜನರ ಹೆಸರಿನಲ್ಲಿ ಈ ಸಂಸ್ಥೆಗಳು ಲೂಟಿ ಮಾಡುತ್ತಿವೆ, ದುಡ್ಡು ಮಾಡುತ್ತಿವೆ, ಲಾಭ ಮಾಡುತ್ತಿವೆ. ಇದರ ಬಗ್ಗೆ ಅರಣ್ಯ ಖಾತೆಯ ಮಂತ್ರಿಗಳು ಕೂಡಲೇ ಸ್ಪೇ ಮಾಡಬೇಕು. ನಿಲ್ಲಿಸಬೇಕು. ಸರ್ಕಾರಕ್ಕೆ ಬರತಕ್ಕ ಆದಾಯ ಇವತ್ತು ತಪ್ಪಿ ಕಡಿಮೆ ಹಣಕ್ಕೆ ಕೊಟ್ಟಿರುವ ಉದ್ದೇಶವಾದರೂ ಏನು ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಕಾಪು ಸಂಜೀವಶೆಟ್ಟಿ. —ಮಾನ್ಯ ಅಧ್ಯಕ್ಷರೆ ಹರಿಜನ ಗಿರಿಜನ ಸಹಕಾರಿ ಸಂಘಗಳಲ್ಲಿ ಹಾಲು ಮಡ್ಡಿ ಸಹಕಾರ ಸಂಘಗಳೆಂದು ಏನು ಇರುತ್ತವೆ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು ಎನ್ನುವ ವಿಚಾರ ಸರಿಯಾದುದಾಗಿರುತ್ತದೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲ ತಾಲ್ಲೂಕುಗಳಲ್ಲಿ ಇರತಕ್ಕಂಥ ಸೊಸೈಟಿಗಳ ನನ್ನ ಅನುಭವದ ಬಗ್ಗೆ ಹೇಳುವುದಾದರೆ ಇಂಥದೇ ಒಂದು ಸೊಸೈಟಿಯಲ್ಲಿ ಹಣ ಬಹಳವಾಗಿ ದುರುಪಯೋಗವಾಗಿರುತ್ತದೆ ಎನ್ನುವ ಸಂಶಯ ಬಂದಿರುತ್ತದೆ. ಇದರಲ್ಲಿ ಏನಾಗಿದೆ ಎಂದರೆ ಹರಿಜನರ ಹೆಸರಿನಲ್ಲಿ ಸರ್ಕಾರದವರು ಕೊಟ್ಟಂತ ಕೋಟ್ಯಾಂತರ ರೂಪಾಯಿಗಳು ಲೂಟಿ ಮಾಡಿರುವ ಕೃತ್ಯ ನಡೆದಿರುತ್ತದೆ. ಸರ್ಕಾರದವರು ಕೊಟ್ಟಿರತಕ್ಕಂಥ ಕೋಟ್ಯಾಂತರ ರೂಪಾಯಿಗಳು ಸರಿಯಾದ ರೀತಿಯಲ್ಲಿ ಹರಿಜನರಿಗೆ ಮುಟ್ಟಿತ್ತಿಲ್ಲ. ಇದನ್ನು ಎಚ್ಚರಿಕೆಯಿಂದ ಆ ಸೈಟ್‌ಗಳು ಏತಕ್ಕಾಗಿ ಕೊಟ್ಟಿಲ್ಲ ಎನ್ನುವುದನ್ನು ಪರಿಶೀಲಿನೆ ಮಾಡಿ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ರಾಮಚಂದ್ರ. —ಮಾನ್ಯ ಅಧ್ಯಕ್ಷರೆ ಇಂಥದೇ ಪ್ರಕರಣಗಳು ನಮ್ಮ ಕುಂದಾಪುರದಲ್ಲಿಯೂ ಕೂಡ ನಡೆಯುತ್ತಿದೆ. ನಮ್ಮ ಕುಂದಾಪುರ ರೇಂಜ್‌ನಲ್ಲಿ ಅಲಮಡ್ಡಿ ಬರತಕ್ಕಂಥ ಮರಗಳು ಜಾಸ್ತಿ ಬೆಳೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿರುತ್ತದೆ. ಮತ್ತು ಇದರ ಬೇಡಿಕೆಯೂ ಕೂಡ ವಿಶೇಷವಾಗಿರುತ್ತದೆ ಎನ್ನುವುದೂ ಸಹ ತಿಳಿದಿರುತ್ತದೆ. ಇಲ್ಲಿಯೂ ಕೂಡ ಒಂದು ಸೊಸೈಟಿ ಇರುತ್ತದೆ ಇದರಲ್ಲಿ ಒಂದು ಸಂಶಯಕ್ಕೆ ಆಸ್ಪದವಾಗಿರುತ್ತದೆ. ಅದೇನೆಂದರೆ ಈ ಸೊಸೈಟಿಯೂ ರಿಜಿಸ್ಟರ್ ಆಗಿರುತ್ತದೆಯೋ ಇಲ್ಲವೋ ಎನ್ನುವುದು ತಿಳಿಯುತ್ತಿಲ್ಲ. ಹರಿಜನಗಿರಿಜನರಿಗೆ ಸೊಸೈಟಿಗಳ ಮುಖಾಂತರ ರಿಯಾಯತಿಗಳನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಈ ಒಂದು ಸೊಸೈಟಿಯನ್ನು ತೆರೆಯಲಾಗಿದೆ. ಇದರ ಅಲ್ಪ ಪ್ರಯೋಜನವಾದರೂ ಈ ಜನರಿಗೆ ದೊರೆಯುವಂಥ್ತವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜಿ. ರಾಮೇಗೌಡ (ಅರಣ್ಯ ಶಾಖೆಯ ಮಂತ್ರಿಗಳು). —ಮಾನ್ಯ ಸದಸ್ಯರ ಹೇಳಿಕೆಯ ಪ್ರಕಾರ ಹಾಲುಮಡ್ಡಿ ಗುತ್ತಿಗೆಯ ಮೂಲಾಟಕ್ಕೆ ದರ್ಖಾಸ್ತಿನಲ್ಲಿ ನಾಲ್ಕು ಅಥವಾ ಐದು ಲಕ್ಷ ರೂಪಾಯಿಗಳು ಬಂದಾಗ್ಯೂ ಸರ್ಕಾರದವರು ಈ ಗುತ್ತಿಗೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟವರ್ಗ ಮತ್ತು ಆರ್ಥಿಕವಾಸಿ ಕೆಲಸಗಾರ ಸರಕಾರಿ ಸಂಘಕ್ಕೆ ೬೦,೦೦೦ ಅಥವಾ ೭೦,೦೦೦ ರೂಪಾಯಿಗಳಿಗೆ ಕೊಡಲಾಗಿದೆ ಮತ್ತು ಗುತ್ತಿಗೆಯನ್ನು ಕೆಲಪರಿಗೆ ಸಹಾಯ ಮಾಡಲು ಸಂಘದ ಹೆಸರಿನಲ್ಲಿ ಕೊಡಲಾಗಿದೆ. ಎಂದು ಆರೋಪಿಸಲಾಗಿದೆ.

ಹಾಲುಮಡ್ಡಿ ಧೂಪವು ಅರಣ್ಯ ಕರಂಕೋಳು ಬಾಬುಗಳ ಜಾತಿಗೆ ಸೇರಿದ್ದು, ಇದನ್ನು ಹಾಲು ಮಡ್ಡಿ ಮರಗಳಿಂದ ತೆಗೆಯಲ್ಪಡುತ್ತದೆ. ಈ ಗುತ್ತಿಗೆಯು ಮೂರು ವರ್ಷಗಳಿಗೆ ಒಳಪಟ್ಟಿರುತ್ತದೆ. ಹಾಲುಮಡ್ಡಿಯನ್ನು ಮುಖ್ಯವಾಗಿ ಊದುಬತ್ತಿ ತಯಾರಿಸಲು ಉಪಯೋಗಿಸುತ್ತಾರೆ. ಹಾಲುಮಡ್ಡಿ ಮರಗಳು ಮಲೆನಾಡು ಪ್ರದೇಶದ ಅರಣ್ಯದ ಒಳಭಾಗಗಳಲ್ಲಿ ಇರುತ್ತವೆ. ಹಾಲುಮಡ್ಡಿಯನ್ನು ತೆಗೆಯುವ ಕಾರ್ಯವನ್ನು ಅಲ್ಲಿ ಸುತ್ತಮುತ್ತಲಿರುವ ಹಳ್ಳಿಗಾರರು ಮಾಡುತ್ತಾರೆ. ಅನೇಕ ದಶಕಗಳಿಂದ ಈ ಕೀರುಕೋಳ ಬಾಬುಗಳನ್ನು ದರಖಾಸ್ತು ಮತ್ತು ಹರಾಜು ಮೂಲಕ ಮಾರಾಟ ಮಾಡಲಾಗುತ್ತಿದೆ. ಸರಕಾರದ ಗಮನಕ್ಕೆ ಬಂದಿರುವ ಪ್ರಕಾರ ಈ ಹಾಲುಮಡ್ಡಿಯನ್ನು ತೆಗೆಯಲು ನೇಮಕರಾದವರು ಹಿಂದುಳಿದ ಪಂಗಡಕ್ಕೆ ಸೇರಿದವರಾದರೂ ಇದರ ಉಪಯೋಗ ಪಡೆಯತಕ್ಕಂಥವರು ಕೆಲವು ಮಧ್ಯಸ್ಥಗಾರರು. ಆದ್ದರಿಂದ, ಈ ಕೆಲಸವನ್ನು ನಿರ್ವಹಿಸಲು ಪರಿಶಿಷ್ಟ ವರ್ಗದವರ ಸಂಘವನ್ನು ಸ್ಥಾಪಿಸಲು

ಸರ್ಕಾರದ ಉದ್ದೇಶವಾಗಿದೆ ೧೯೭೨ನೇ ಇಸವಿಯಿಂದ ಸರಕಾರವು ಕಿರುಕೋಳಿ ಬಾಬುಗಳನ್ನು ತೆಗೆಯಲು ಏಳು ಪರಿಶಿಷ್ಟ ವರ್ಗದವರ ಸಂಘಗಳಿಗೆ ನೇಮಿಸಲಾಯಿತು. ಸರ್ಕಾರಿ ಹುಕುಂ ನಂ. ಎ.ಎಫ್.ಡಿ. ೨೧೯ ಎಫ್.ಎ.ಡಿ. ೬೨, ತಾ. ೨೫-೧೧-೧೯೭೨ ಮತ್ತು ಎಸ್.ಡಬ್ಲ್ಯು.ಡಿ. ೩೩೩ ಎಸ್.ಎ.ಡಿ ೭೩, ತಾ. ೧೭-೭-೧೯೭೩ ಇದಲ್ಲದೆ ದಕ್ಷಿಣ ವಲಯಗಳ ಅರಣ್ಯ ಮುಖ್ಯಾಧಿಕಾರಿಗಳ, ೧೯೭೫ರ ಸಮ್ಮೇಳನದ ನಿರ್ಣಯದ ಪ್ರಕಾರ ಸರ್ಕಾರದವರು ಎಲ್ಲಾ ಕೀರಕೋಳಿ ಬಾಬುಗಳನ್ನೂ ಪರಿಶಿಷ್ಟ ವರ್ಗಗಳ ಮತ್ತು ಆದಿಮವಾಸಿಗಳ ಸಂಘಕ್ಕೆ ತನ್ನ ಹುಕುಂ ನಂ. ಎಫ್.ಎಫ್.ಡಿ. ೨೬೪ ಎಫ್.ಎಡಿ ೭೫ ತಾರೀಖು ೭-೧೦-೧೯೭೬ರಲ್ಲಿ ಕೊಡಬೇಕೆಂದು ಆದೇಶ ನೀಡಿದ್ದಾರೆ. ತದನಂತರ ಅಕ್ಟೋಬರ್ ೧೯೭೬ನೇ ಇಸವಿಯಲ್ಲಿ ಇದನ್ನು ಚರ್ಚಿಸಲು ಮುಖ್ಯ ಮಂತ್ರಿಗಳ ಸಭೆ ಸೇರಿತ್ತು. ಆ ಸಭೆಯ ತೀರ್ಮಾನದಂತೆ. ಕಂಟ್ರಾಕ್ಟ್ ಪದ್ಧತಿಯನ್ನು ತೆಗೆದು ಆದಿಮವಾಸಿ ಸಂಘದವರು ತೆಗೆದ ಕಿರುಕೋಳಿ ಬಾಬುಗಳಿಗೆ ನ್ಯಾಯವಾದ ಬೆಲೆ ಸಿಕ್ಕುವಂತೆ ಮಾಡಬೇಕೆಂದು ತೀರ್ಮಾನಿಸಲಾಯಿತು. ಈ ದಿಸೆಯಲ್ಲಿ ಸರ್ಕಾರವು ತಮ್ಮ ಆಜ್ಞೆ ನಂ. ಎಫ್.ಎಫ್.ಡಿ.-೩೦ಎಫ್ ಎಡಿ.—೭೭ ತಾರೀಖು ೩-೮-೧೯೭೭ರಲ್ಲೂ, ಕೂಡ ಈ ಕೀರಕೋಳಿ ಬಾಬುಗಳ ಗುತ್ತಿಗೆಯನ್ನು ಆದಿಮವಾಸಿ ಸಂಘಗಳಿಗೆ ನಿಗದಿ ಬೆಲೆಗಿಂತ ೧೭½ ಶೇಕಡಾ ರಿಯಾಯಿತಿ ದರದಲ್ಲಿ ಕೊಡಬೇಕೆಂದು ಆದೇಶ ನೀಡಲಾಯಿತು. ಆದರಿಂದ, ಕಿರುಕೋಳಿ ಬಾಬುಗಳನ್ನು ಆದಿಮವಾಸಿ ಸಂಘದವರಿಗೆ ಕೊಡುವುದು ಹೊಸದೇನಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗ ಮತ್ತು ಆದಿಮವಾಸಿ ಕೆಲಸಗಾರರ ಸಂಘದವರು ಜೂನ್ ೭೮ರಲ್ಲಿ ಸರ್ಕಾರವನ್ನು ಬೇಡಿಕೊಂಡು ಕುಂದಾಪುರ. ಮತ್ತು ಮಂಗಳೂರು ಅರಣ್ಯ ವಿಭಾಗಗಳಿಂದ ಹಾಲುಮಡ್ಡಿ ಗುತ್ತಿಗೆಯನ್ನು ತಮ್ಮ ಸಂಘಕ್ಕೆ ಕೊಟ್ಟು ಗುತ್ತಿಗೆದಾರರ ಹಿಡಿತದಿಂದ ಬಿಡಿಸಿ ತಮಗೆ ಸಹಾಯ ನೀಡಬೇಕೆಂದು ಪ್ರಾರ್ಥಿಸಿತು.

ಮಂಗಳೂರು ವಿಭಾಗದ ಐದು ಕ್ಷೇತ್ರಗಳು ಮತ್ತು ಕುಂದಾಪುರ ಅರಣ್ಯ ವಿಭಾಗದ ಏಳು ಕ್ಷೇತ್ರಗಳಲ್ಲಿ ಮೂರು ಕ್ಷೇತ್ರಗಳಿಂದ ಈ ಸಂಘದವರಿಗೆ ಹಾಲುಮಡ್ಡಿ ಗಂತ್ತಿಗೆಗೆ ನೀಡಬೇಕೆಂದು ತೀರ್ಮಾನಿಸಲಾಯಿತು.

ಈ ಕೆಳಕಾಣಿಸಿದಂತೆ ಈ ಮೂರು ಕ್ಷೇತ್ರಗಳಿಂದ ಕಳೆದ ಎರಡು ಬಾರಿ ಬಂದ ದರ ಮತ್ತು ಸರ್ಕಾರಿ ನಿಗದಿಮಾಡಿದ ಬೆಲೆ ಹೀಗಿದೆ.

ಕ್ಷೇತ್ರ	೭೨—೭೫ರಲ್ಲಿನ ದರಗಳು	೭೫—೭೮ರ ದರಗಳು	ಸೂಚಿತ ತಗ್ಗು ಬೆಲೆ
೧) ಬೈಂದೂರು	ರೂ. ೪೬,೮೦೦	ರೂ. ೪,೦೫೫	ರೂ. ೨೨,೦೦೦
೨) ಕುಂದಾಪುರ	ರೂ. ೧,೦೮,೬೦೦	ರೂ. ೧೯,೫೫೦	ರೂ. ೫೧,೦೦೦
೩) ಶಂಕರನಾರಾಯಣ	ರೂ. ೯೬,೫೦೦	ರೂ. ೧೮,೫೫೦	ರೂ. ೪೩,೦೦೦

ಈ ಬೆಲೆಗಳಲ್ಲಿ ಬಹಳವಾಗಿ ಏರುಪೇರುಆಗುವ ಸಂಭವವಿದ್ದುದರಿಂದ ಈ ಮೇಲ್ಕಾಣಿಸಿದ ಮೂರು ಕ್ಷೇತ್ರಗಳಿಂದ ಸೂಚಿತ ತಗ್ಗು ಬೆಲೆಗಿಂತ ಶೇಕಡಾ ೧೫ರಷ್ಟು ಹೆಚ್ಚು ಬೆಲೆಗೆ ಕೊಡಬಹುದೆಂದು ಅಭಿಪ್ರಾಯ ಪಡಲಾಯಿತು. ಆದರಂತೆ, ಮೇಲ್ಕಾಣಿಸಿರುವ ಮೂರು ಕ್ಷೇತ್ರಗಳನ್ನೂ, ಈ ಸಂಘಕ್ಕೆ ಕೆಳಕಾಣಿಸಿದ ದರಗಳಲ್ಲಿ ನೀಡಲಾಯಿತು.

೧. ಬೈಂದೂರು	...	ರೂ. ೨೫,೩೦೦
೨. ಕುಂದಾಪುರ	...	ರೂ. ೫೯,೮೦೦
೩. ಶಂಕರನಾರಾಯಣ	...	ರೂ. ೫೦,೦೨೫

ಸರ್ಕಾರದ ಈ ಮೂರು ಕ್ಷೇತ್ರಗಳನ್ನೂ ಕೂಡ ದರಖಾಸ್ತು ಮತ್ತು ಹರಾಜಿನಿಂದ ಹಿಂತೆಗೆದು ಕೊಳ್ಳಲು. ಮಾಡಿದ ಆದೇಶವು, ಕುಂದಾಪುರ ವಿಭಾಗ, ಅರಣ್ಯಾಧಿಕಾರಿಯವರಿಗೆ ಈ ದರಖಾಸ್ತು ತೆಗೆದು ಕೊಳ್ಳಲು ನಿಗದಿ ಮಾಡಿದ್ದ ತಾರೀಖಿನ ಬೆಳಿಗ್ಗೆ ತಲುಪಿತು. ಈ ಸಂಬಂಧದಲ್ಲಿ ದರಖಾಸ್ತನ್ನು ತೆಗೆದು

ಕೊಳ್ಳುವುದಿಲ್ಲಾ ಎಂದು ತಿಳಿಸಿದ್ದಾಗ್ಯೂ ನಾಲ್ಕು ದರಖಾಸ್ತುಗಳನ್ನು ನಿಗದಿ ಪಡಿಸಿದ ವೇಳೆಯಲ್ಲಿ ಕೊಡ ಲಾಯಿತು. ಈ ದರಖಾಸ್ತು ಕೊಟ್ಟ ಲಕೋಟೆಗಳು ಮೊಹರು ಮಾಡಿದ್ದರಿಂದ ಈ ದರಖಾಸ್ತುಗಳು ಮೇಲ್ಕಂಡ ಮೂರು ಕ್ಷೇತ್ರಕ್ಕೆ ಸಂಬಂಧಿಸಿದ್ದವೋ ಅಲ್ಲವೋ ಎಂಬುದು ತಿಳಿಯಲಿಲ್ಲ. ದರಖಾಸ್ತುಗಳನ್ನು ತೆಗೆದು ಪರಿಶೀಲಿಸಿದಾಗ ಈ ಮೂರು ಕ್ಷೇತ್ರಕ್ಕೂ ದರಖಾಸ್ತುಗಳಿರುವುದು ತಿಳಿದು ಬಂದಿತು. ಈ ಕ್ಷೇತ್ರಗಳಿಗೆ ದರಖಾಸ್ತಿನಲ್ಲಿ ನಮೂದಿಸಿರುವ ದರಗಳು ಈ ಕೆಳಕಾಣಿಸಿದಂತಿದ್ದವು.

			ರೂ.
೧.	ಬೈಂದೂರು	...	೯೫,೭೮೬
೨.	ಕುಂದಾಪುರ	...	೧,೨೫,೭೭೭
೩.	ಶಂಕರನಾರಾಯಣ	...	೧,೭೮ ೭೩೭

ಈ ತರಹೆಯ ಹೆಚ್ಚಿನ ಬೆಲೆ, ಹಾಲುಮಡ್ಡಿಯ ಬೆಲೆ ಏರಿಕೆಯಿಂದ ಬಂದಿತೋ ಅಥವಾ ಮೇಲ್ಕಂಡ ಸಂಘಕ್ಕೆ ಗುತ್ತಿಗೆಯನ್ನು ನೀಡುವ ಸರ್ಕಾರದ ತೀರ್ಮಾನಕ್ಕೆ ಸವಾಲಿನಂತೆ ಬಂದಿತೋ ಹೇಳಲು ಬರುವು ದಿಲ್ಲ. ಸಂಘದ ಹೆಸರಿನಲ್ಲಿ ವೈಯುಕ್ತಿಕವಾಗಿ ಲಾಭಗೊಳಿಸಬಾರದೆಂಬ ಮಾನ್ಯ ಸದಸ್ಯರ ಅನುಮಾನ ವನ್ನು ನಾನು ಒಪ್ಪುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರದ ಆದೇಶವು ಮೇಲ್ಕಂಡ ಸಂಘವು ಪರಿಶಿಷ ಪರ್ಗ ಮತ್ತು ಆದಿಮವಾಸಿಗಳಿಂದ ನಡೆಸಲ್ಪಟ್ಟಿದ್ದು ಮತ್ತು ಸರ್ಕಾರೀ ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರಿಂದ ಈ ಸಂಘದ ಪ್ರಮಾಣಿಕತೆಯ ಬಗ್ಗೆ ತೀರಿಕೆ ಪ್ರಮಾಣ ಪತ್ರ ಪಡೆದಿರಬೇಕೆಂದು ಆದೇಶಿಸ ಲಾಯಿತು. ಕುಂದಾಪುರ ಅರಣ್ಯ ವಿಭಾಗಾಧಿಕಾರಿಗಳು ಈ ವಿಷಯದಲ್ಲಿ ಸಹಕಾರೀ ಸಂಘಗಳ ರಿಜಿಸ್ಟ್ರಾರ್ ಅವರಿಗೆ ಬರೆದಿರುತ್ತಾರೆ. ಅವರಿಂದ ಈ ಸಂಘಗಳ ಪ್ರಮಾಣಿಕತೆಯ ಬಗ್ಗೆ ಉತ್ತರ ದೊರೆತ ನಂತರ ಮೇಲ್ಕಾಣಿಸಿದ ಹಾಲುಮಡ್ಡಿ ಕೀರುಕೋಳ ಬಾಬುಗಳನ್ನು ಮೇಲ್ಕಂಡ ಸಂಘಗಳಿಗೆ ಒಪ್ಪಿಸ ಲಾಗುವುದು. ಹಾಗೂ ಮಾನ್ಯ ಸದಸ್ಯರು ಹೇಳಿದರು ಫೈನಾಶಿಯಲ್ ಡಿಪಾರ್ಟ್‌ಮೆಂಟ್‌ನ ಅಭಿಪ್ರಾಯ ವನ್ನು ಪಡೆಯಬೇಕಾಗಿತ್ತು ಎಂದು ಖಂಡಿತವಾಗಿಯೂ ಪಡೆದಿರುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಅರಣ್ಯ ಸಚಿವರು ಎಲ್ಲ ವಿವರ ಗಳನ್ನು ಕೊಟ್ಟಿರುತ್ತಾರೆ. ಹೀಗೆ ಕೊಟ್ಟಿರತಕ್ಕಂಥ ವಿವರಣೆಗಳ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳು ವುದಕ್ಕೆ ಬಯಸುತ್ತೇನೆ. ಒಂದನೆಯದೇನೆಂದರೆ ಗುತ್ತಿಗೆಗಳನ್ನು ಸೊಸೈಟಿಗಳಿಗೆ ಕೊಡಬೇಕು ಎನ್ನುವ ಬಗ್ಗೆ ಮುಂಚೆಯೇ ಸಹಕಾರಿಸಂಘಗಳ ಇಲಾಖೆಯಿಂದ ಅದರ ಸ್ಪಷ್ಟೀಕರಣವನ್ನು ಪಡೆಯಬೇಕಾಗಿತ್ತು. ಅದನ್ನು ಏತಕ್ಕೆ ಪಡೆಯಲಿಲ್ಲವೆಂದು ಕೇಳುತ್ತೇನೆ ? ಎರಡನೆಯದಾಗಿ ಕುಂದಾಪುರ ಸುತ್ತಮುತ್ತಲೂ ಇರತಕ್ಕಂಥ ಜನರು ಎಷ್ಟು ಜನ ಸದಸ್ಯರು ಇರುತ್ತಾರೆಂದು ತಿಳಿದುಕೊಳ್ಳಬೇಕಾಗಿತ್ತು.

ಈ ಕೀರಕೋಳ ಬಾಬುಗಳ ಗುತ್ತಿಗೆಯನ್ನು ಈ ಆದಿಮವಾಸಿ ಸಂಘಗಳಿಗೆ ಕಳೆದ ವರ್ಷ ೧೭½ ಪರ್ಸೆಂಟ್ ರಿಯಾಯಿತಿ ದರದಲ್ಲಿ ಕೊಟ್ಟಿದ್ದೀರಿ. ಈ ವರ್ಷವೂ ಕೂಡ ಇದೇ ದರದಲ್ಲಿ ಕೊಡಬಹುದಾಗಿತ್ತು. ಈವಾಗ ೯೫ ಸಾವಿರ ಚಿಲ್ಲರೆ ಇದ್ದುದನ್ನು ೨೫ ಸಾವಿರ ಚಿಲ್ಲರೆಗೆ ಕೊಟ್ಟಿದ್ದೀರಿ ಮತ್ತು ೯ಲಕ್ಷ ೨೫ ಸಾವಿರ ಚಿಲ್ಲರೆ ಇದ್ದುದನ್ನು ೩೯ ಸಾವಿರ ಚಿಲ್ಲರೆಗೆ ಕೊಟ್ಟಿದ್ದೀರಿ ಮತ್ತು ೧ಲಕ್ಷ ೭೮ಸಾವಿರ ಚಿಲ್ಲರೆ ಇದ್ದುದನ್ನು ೫೦ ಸಾವಿರ ಚಿಲ್ಲರೆಗೆ ಕೊಟ್ಟಿದ್ದೀರಿ. ಈ ರೀತಿ ಕೊಟ್ಟಿರುವುದರಲ್ಲಿ ಇದರಲ್ಲಿ ಏನೋ ಸ್ಪಷ್ಟ ವಾದ ಕಾರಣ ಇರಬೇಕು ಇದರಲ್ಲಿ ಅನುಮಾನ ಕಾಣುತ್ತಾ ಇದೆ. ಆದುದರಿಂದ ಈ ಸೊಸೈಟಿಗೆ ಗುತ್ತಿಗೆ ಕೊಡುವ ಪೂರ್ವ ಸ್ಪಷ್ಟೀಕರಣ ಕೊಡದೆ ಹೀಗೆ ಮಾಡಬಾರದಾಗಿತ್ತು. ಮತ್ತು ಮಾನ್ಯ ಸಚಿವರು ಹೇಳಿದರು ಈ ತರಹೆಯ ಹೆಚ್ಚಿನ ಬೆಲೆ ಹಾಲುಮಡ್ಡಿಯ ಬೆಲೆ ಏರಿಕೆಯಿಂದ ಬಂದಿತೋ ಅಥವಾ ಮೇಲ್ಕಂಡ ಸಂಘಕ್ಕೆ ಗುತ್ತಿಗೆಯನ್ನು ನೀಡುವ ಸರ್ಕಾರದ ತೀರ್ಮಾನಕ್ಕೆ ಸವಾಲಿನಂತೆ ಹೆಚ್ಚಿನ ಬೆಲೆ ಬಂದಿತೋ ಹೇಳಲು ಬರುವುದಿಲ್ಲ ಎಂದು. ಅದಕ್ಕೆ ನಾನು ಹೇಳುತ್ತೇನೆ, ಶಿವಮೊಗ್ಗ ಜಿಲ್ಲೆ ಮತ್ತು ಕಾರವಾರ ಜಿಲ್ಲೆಯಲ್ಲಿ ನಿಜವಾಗಿಯೂ ಹೆಚ್ಚಿನ ಬೆಲೆ ಬಂದಿದೆ. ಒಂದಕ್ಕೆ ನಾಲ್ಕುಪಟ್ಟು ಬೆಲೆ ಬಂದಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಸ್ಟೇಟ್‌ಮೆಂಟಿಗೆ ಸಂಬಂಧಪಡದೇ ಇರುವುದನ್ನು ಪ್ರಸ್ತಾಪ ಮಾಡಬಾರದು. ಇದಕ್ಕೆ ಸಂಬಂಧಪಟ್ಟಂತೆ ಇರುವುದನ್ನು ಮಾತ್ರ ಕೇಳಬೇಕು.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ,—ಶಿವಮೊಗ್ಗ ಜಿಲ್ಲೆ ಮತ್ತು ಕಾರವಾರ ಜಿಲ್ಲೆಯಲ್ಲಿ ಒಂದಕ್ಕೆ ನಾಲ್ಕು ಪಟ್ಟು ಹೆಚ್ಚು ಬೆಲೆ ಬಂದಿದ್ದರೂ ಕೂಡ ಮಾನ್ಯ ಸಚಿವರು ಇದು ಸವಾಲಿನ ರೂಪದಲ್ಲಿ ಬಂತೋ ಅಥವಾ ಹೇಗೆ ಬಂತೋ ಹೇಳಲಿಕ್ಕೆ ಬರುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕು.

ಶ್ರೀ ಕೆ. ರಾಮಭಟ್.—ಮಾನ್ಯ ಅರಣ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದರು, ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರಿಂದ ಈ ಸಂಘದ ಪ್ರಮಾಣಕತೆಯ ಬಗ್ಗೆ ಉತ್ತರ ದೊರೆತ ನಂತರ ಮೇಲ್ಕಾಣಿಸಿದ ಹಾಲುಮಡ್ಡಿ ಕೀರುಕೋಳ ಬಾಬುಗಳನ್ನು ಮೇಲ್ಕಂಡ ಸಂಘಗಳಿಗೆ ಒಪ್ಪಿಸಲಾಗುವುದು ಎಂದು ಹೇಳಿದ್ದಾರೆ. ಹಾಗಾದರೆ ಅವರ ಉತ್ತರದಿಂದ ಈರೀತಿ ನಡೆಯುವುದಾದರೆ ಇದನ್ನು ವಿಜಿಲೆನ್ಸ್ ಕಮೀಷನ್‌ಗೆ ಕೊಡಬೇಕು ಎಂದು ಹೇಳುತ್ತೇನೆ. ಯಾರು ಯಾರಿಗೆ ಎಷ್ಟೆಷ್ಟು ಮೋಸ ಮಾಡಿದ್ದಾರೆ. ಎಂದು ತಿಳಿದುಕೊಳ್ಳುವುದಕ್ಕೆ ಇದನ್ನು ಅವರಿಗೆ ಕೊಡಬೇಕು ಎಂದು ಹೇಳುತ್ತೇನೆ. ಯಾರು ಯಾರಿಗೆ ಇದರಲ್ಲಿ ಎಷ್ಟು ಟೋಪಿ ಹಾಕಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆನಂತರ ಈ ವ್ಯವಹಾರ ಮಾಡಲಿ. ದಯವಿಟ್ಟು ಅಲ್ಲಿಯವರೆಗೆ ಈ ಸಂಘಕ್ಕೆ ಇದನ್ನು ಒಪ್ಪಿಸಬಾರದು ನಾನು ಸಲಹೆ ಕೊಡುತ್ತೇನೆ

ಶ್ರೀ ಜಿ. ರಾಮೇಗೌಡ.—ಸಹಕಾರ ಇಲಾಖೆಗೆ ಮೊದಲು ಇವರು ಇದರ ವಿವರಗಳನ್ನೆಲ್ಲಾ ಕೊಡಬೇಕಾಗಿತ್ತು. ಅದು ಕೊಟ್ಟಾದ ಮೇಲೆ ಅವರಿಂದ ಒಂದು ಸರ್ಟೀಫಿಕೇಟ್ ತಂದಿದ್ದಾರೆ, ಅದರ ನಂಬರ್, ಅದರ ಹೆಸರು ಮತ್ತು ಆ ಸಹಕಾರ ಸಂಸ್ಥೆಯ ಸೀಲು ಇದೆ. ಇದಷ್ಟೂ ಇದ್ದ ಮೇಲೆ ನಾವು ಕೊಡುವುದು ಸರಿ. ಮತ್ತು ಮಾನ್ಯ ಸದಸ್ಯರು ಹೇಳಿದರು ಇದರಲ್ಲಿ ಏನೋ ಮೋಸ ನಡೆದಿದೆ ಎಂದು ನಾನು ಕೊಟ್ಟಿರತಕ್ಕಂಥಾ ಸ್ಟೇಟ್‌ಮೆಂಟ್‌ನಲ್ಲಿ ಕುಂದಾಪುರದ ಕ್ಷೇತ್ರದಲ್ಲಿ ೧೯೭೨ ರಿಂದ ೧೯೭೫ನೇ ಇಸವಿಯವರೆಗೆ ೧ ಲಕ್ಷ ೮೯ ಸಾವಿರ ರೂಪಾಯಿನವರೆಗೆ ಟೆಂಡರ್ ಬಂದಿತ್ತು. ೧೯೭೫ರಿಂದ ೧೯೭೮ನೇ ಇಸವಿಯವರೆಗೆ ೧೯ ಸಾವಿರ ರೂಪಾಯಿನವರೆಗೂ ಬರಲಿಲ್ಲ. ಆವಾಗ ಇದರ ಬಗ್ಗೆ ಯಾರೂ ಆಕ್ಷೇಪಣೆ ಮಾಡಲಿಲ್ಲಾ. ಮೂರು ವರ್ಷದ ಆವರೇಜ್ ತೆಗೆದುಕೊಂಡರೆ ಈವಾಗಲೇ ಹೆಚ್ಚಿಗೆ ಬಂದಿದೆ, ಆದುದರಿಂದ ಆ ಸಂಘಕ್ಕೆ ಕೊಟ್ಟಿದ್ದು. ರಿಜಿಸ್ಟ್ರಾರ್‌ರವರಿಗೆ ಬರೆದಿದ್ದೇನೆ ಇದರಲ್ಲಿ ಮೋಸ ಏನಾದರೂ ನಡೆದಿದೆಯೇ ಅಥವಾ ಯಾರಾದರೂ ಕೂಡ ಈ ಪರಿಶಿಷ್ಟ ವರ್ಗಗಳು ಮತ್ತು ಆದಿವಾಸಿಗಳ ಜನರನ್ನು ಶೋಷಣೆ ಮಾಡುವಂಥಾ ಜನರೂ ಇದ್ದಾರೆಯೇ ಎಂದು ಕೇಳಿದ್ದೇನೆ. ಅವರಿಂದ ಈ ಬಗ್ಗೆ ರಿಪೋರ್ಟ್ ಬಂದಮೇಲೆನೇ ಅವರಿಗೆ ಈ ಕೆಲಸ ಕೊಡುತ್ತೇವೆ. ಆದುದರಿಂದ ಮಾನ್ಯ ಸದಸ್ಯರು ಇದರಿಂದ ಯಾರಿಗೋ ಉಪಕಾರ ಮಾಡಿದ್ದಾರೆ ಎನ್ನುವ ಸಂದೇಹ ಇಟ್ಟುಕೊಂಡಿದ್ದಾರೆ ಅದು ಇರಬಾರದು ಎಂದು ನನ್ನ ಭಿನ್ನಹ.

ಇನ್ನು ಇದು ವಿಜಿಲೆನ್ಸ್ ಕಮೀಷನ್ಸ್‌ಗೆ ಹೋಗಬೇಕು ಎಂದು ಹೇಳಿದರು. ಇದರಲ್ಲಿ ಇನ್ನೂ ಏನೂ ಕೆಲಸ ಮಾಡಿಲ್ಲ. ಏನೂ ಕೆಲಸ ಮಾಡದೇ ಇದ್ದಾಗ ಇದು ವಿಜಿಲೆನ್ಸ್ ಕಮೀಷನ್‌ಗೆ ಏತಕ್ಕೆ ಹೋಗಬೇಕು ? ಏನಾದರೂ ಇದರ ಬಗ್ಗೆ ಕಂಟ್ರಾಕ್ಟ್ ತೆಗೆದುಕೊಂಡು ಇದರಲ್ಲಿ ಏನಾದರೂ ಅನುಮಾನ ಇದ್ದರೆ ಅಥವಾ ಬಿಲ್ಲಿನಲ್ಲಿ ಏನಾದರೂ ನಡೆದಿದ್ದರೆ ಅಥವಾ ಇದರಲ್ಲಿ ಮಧ್ಯಸ್ಥಗಾರರು ಯಾರಾದರೂ ಮೋಸ ಮಾಡಿದ್ದರೆ ಆವಾಗ ವಿಜಿಲೆನ್ಸ್‌ಗೆ ಹೋಗಬೇಕು ಅಂತ ಹೇಳಿದರೆ ಅದನ್ನು ನಾನು ಕೇಳುತ್ತೇನೆ ಇನ್ನೂ ಅವರಿಗೆ ಕೆಲಸವೇ ಕೊಟ್ಟಿಲ್ಲ, ಅವರು ಇನ್ನೂ ಆಲ್ಲಿ ಕೆಲಸವನ್ನೇ ಶುರು ಮಾಡಿಲ್ಲಾ, ಹೀಗಿರುವಾಗ ಮಧ್ಯಸ್ಥಗಾರರು ಯಾರು ಅನ್ನುವುದಕ್ಕೆ ಮತ್ತು ಇದನ್ನು ವಿಜಿಲೆನ್ಸ್ ಕಮೀಷನ್‌ಗೆ ಹೋಗಬೇಕು ಅನ್ನುವುದು ಯಾವುದೇ ಅರ್ಥವಿಲ್ಲಾ ಎಂದು ಹೇಳುತ್ತೇನೆ.

ಬಹುಶಃ ೨-೩ ವರ್ಷದ ಆವರೇಜ್ ತೆಗೆದುಕೊಂಡು ನೋಡಿದರೆ ಈ ಸಹಕಾರ ಸಂಘಕ್ಕೆ ೧೭೧/೨ ಪರ್ಸೆಂಟ್ ಕಡಿಮೆ ಕೊಟ್ಟಿದ್ದೇವೆ. ಇದರ ಬಗ್ಗೆ ಟೆಂಡರ್ ಹಾಕಿದ್ದರೆ ಅದರ ವಿಚಾರವೇ ಬೇರೆ. ಈ ಸಹಕಾರ ಸಂಘಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುವಂಥಾದ್ದು ಮಾನ್ಯ ಸದಸ್ಯರಿಗೂ ಸೇರಿದೆ, ನನಗೂ ಸೇರಿದೆ ಮತ್ತು ಇದು ಎಲ್ಲ ಸದಸ್ಯರಿಗೇ ಸೇರಿದ್ದು. ಇದರಲ್ಲಿ ಲಕ್ಷಾಂತರ ರೂಪಾಯಿ ಲಾಭ ಬರುವ ಹಾಗೆ ಮಾಡಿರಿ ಎಂದು ಸಂಘದ ಸದಸ್ಯರಿಗೆ ಹೇಳಬೇಕು ಎಂದು ಹೇಳುತ್ತೇನೆ. ಆದಕ್ಕಾಗಿ ನಾನು ಎಲ್ಲರ ಸಹಕಾರವನ್ನೂ ಸಹ ಕೋರುತ್ತೇನೆ. ಯಾರು ಇದರಲ್ಲಿ ಪರಿಶಿಷ್ಟ ವರ್ಗಗಳ ಮತ್ತು ಆದಿವಾಸಿಗಳ ಜನರನ್ನು ಶೋಷಣೆ ಮಾಡುತಾ.ರೋ ಅವರನ್ನು ನೋಡಿಕೊಳ್ಳುವಂತೆ ಎಲ್ಲರೂ ಸಹ

ಕಾರ ಕೊಡಬೇಕು. ಮತ್ತು ಈ ಬಗ್ಗೆ ಸಹಕಾರಿ ಇಲಾಖೆಯೂ ಕೂಡ ಸಹಾಯ ಮಾಡುತ್ತದೆ, ತಾವು ಗಳು ಕೂಡ ಸಹಾಯ ಮಾಡಿ ಆ ಜನಗಳಿಗೆ ಸಹಾಯವಾಗುವಂತೆ ಅವರನ್ನು ಹೆಚ್ಚು ಶೋಷಣೆ ಮಾಡದೇ ಇರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಎ. ರಾಮಚಂದ್ರ.—ಮಾನ್ಯ ಆರಣ್ಯ ಸಚಿವರು ಹೇಳಿದರು ಅವರು ರಿಜಿಸ್ಟರ್ಡ್ ಮಾಡಿಸಿ ಕೊಂಡು ಸರ್ಟಿಫಿಕೇಟ್ ತೆಗೆದುಕೊಂಡು ಬರುತ್ತಾರೆ ಎಂದು ಹೇಳಿದರು. ಅದಕ್ಕೆ ನಾನು ಹೇಳುತ್ತೇನೆ, ಈ ರಿಜಿಸ್ಟರ್ಡ್ ಅನ್ನು ಯಾರು ಮಾಡುತ್ತಾರೆ ಅನ್ನುವುದನ್ನು ತಾವು ಗಮನಿಸಬೇಕು. ಒಬ್ಬ ಹರಿಜನ ಸದಸ್ಯನೂ ಇದರಲ್ಲಿ ಇಲ್ಲ. ನಿಮ್ಮ ರಿಜಿಸ್ಟ್ರಾರ್‌ರವರಿಂದ ಈ ಬಗ್ಗೆ ನಿಮಗೇನಾದರೂ ರಿಪೋರ್ಟ್ ಬಂದರೆ ಆದರ ಆಧಾರದ ಮೇಲೆ ನೀವು ಕೊಡುತ್ತೀರಿ. ನಾನು ಹೇಳುತ್ತೇನೆ, ನಿಮ್ಮ ರೀತಿಯಲ್ಲಿ ಈ ರಿಜಿಸ್ಟ್ರೇಷನ್ ಮಾಡಿಸುವುದನ್ನು ಒಪ್ಪಿಕೊಳ್ಳುವುದಾದರೆ ನಿಮ್ಮ ಇಲಾಖೆಯ ರಿಪೋರ್ಟಿನಲ್ಲಿ ಏನೋ ಕೈವಾಡ ಇದೆ ಎಂದು ಅನುಮಾನ ಪಡಬೇಕಾಗುತ್ತದೆ. ಇದನ್ನು ತಾವು ಗಮನಿಸಬೇಕು ಏತಕ್ಕೆಂದರೆ ನಮ್ಮ ಮಂಗಳೂರು ಜಿಲ್ಲೆಯಲ್ಲಿ ಯಾವ ಯಾವ ತರಹ ಸೊಸೈಟಿಗಳು ಇವೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಇದು ಸರ್ಕಾರದ ಇಲಾಖೆಯ ರಿಪೋರ್ಟ್. ಕೋ-ಆಪರೇಷನ್ ಡಿಪಾರ್ಟ್‌ಮೆಂಟಿನ ಒಬ್ಬ ದೊಡ್ಡ ಅಧಿಕಾರಿ ಏನು ಇದ್ದಾರೆ ಅವರ ಇಲಾಖೆಯಿಂದ ಬಂದ ರಿಪೋರ್ಟ್‌ನಲ್ಲಿ ನಂಬಿಕೆ ಇಡದೇ ಹೋದರೆ ಬಹುಶಃ ಅವರು ಇನ್ನಾವುದರಲ್ಲಿ ನಂಬಿಕೆ ಇಟ್ಟಾರು. ನನಗೆ ಅರ್ಥವಾಗುವುದಿಲ್ಲ. ಮಾನ್ಯ ಸದಸ್ಯರು ಇದನ್ನು ನಂಬಬೇಕು. ಏನಾದರೂ ಇದರಲ್ಲಿ ಮೋಷಣೆ ನಡೆಯುತ್ತಾ ಇದ್ದರೆ ಅದನ್ನು ಬರೆಯೋಣ.

ಶ್ರೀ ಕಾಪು ಸಂಜೀವಶೆಟ್ಟಿ.—ಈ ಹರಿಜನ ಸೊಸೈಟಿಯಲ್ಲಿರುವ ಮೆಂಬರ್ಸ್ ಯಾರು ಯಾರು ಇದ್ದಾರೆ ಅನ್ನುವುದನ್ನು ನೋಡಬೇಕು. ಇದರ ಮೇಲೆ ಬೇಕಾದಷ್ಟು ಆರೋಪ ಇದೆ. ಆದರೂ ಕೂಡ ಇದನ್ನು ರಿಜಿಸ್ಟರ್ಡ್ ಮಾಡಿದ್ದಾರೆ. ಇದರಲ್ಲಿ ಯಾರು ಯಾರು ಕೆಲಸ ಮಾಡುತ್ತಿದ್ದಾರೆ, ಅದು ಚೆನ್ನಾಗಿ ನಡೆಯುತ್ತದೆಯೇ ಎನ್ನುವುದನ್ನು ನೋಡಿ ರಿಜಿಸ್ಟರ್ಡ್ ಮಾಡಬೇಕು. ಇದರಲ್ಲಿ ಮೋದಲೇ ಬೇಕಾದಷ್ಟು ಆರೋಪಗಳು ಇವೆ.

ಶ್ರೀ ಜಿ. ರಾಮೇಗೌಡ.—ರಿಜಿಸ್ಟರ್ಡ್ ಮಾಡಿರುವ ಸಹಕಾರ ಸಂಘಗಳ ಮೇಲೆ ಆರೋಪ ಹೊರಿಸುವುದಕ್ಕೆ ನಾನು ಸಿದ್ಧನಿಲ್ಲಾ. ಇದರ ಬಗ್ಗೆ ರಿಜಿಸ್ಟ್ರಾರ್‌ರವರಿಂದ ರಿಪೋರ್ಟ್ ಬರಲಿ, ಆದರಲ್ಲಿ ಏನೇನು ಮೋಸ ನಡಿದಿದೆ, ಏನೇನು ವಂಚನೆ ಮಾಡಿದ್ದಾರೆ ಮತ್ತು ಏನೇನು ದಗ ಮಾಡಿದ್ದಾರೆ ನೋಡೋಣ. ಅಂಥಾದ್ದೇನಾದರೂ ಇದ್ದರೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳೋಣ.

Message from the Speaker—L.A. Announcement

MR. SPEAKER.—I have received a message from the Chairman, Legislative Council, as follows.—

> "As required by rule 106 of the Rules of Procedure and Conduct of Business in the Karnataka Legislative Council I send herewith the Karnataka Electricity Supply Undertaking (Acquisition) (Amendment) Bill, 1978 which has been agreed to by the Legislative Council without amendment on 22nd August, 1978."